ಇ) ಈ ಯೋಜನೆಯಡಿ ಹುಬ್ಬಳ್ಳಿ ಧಾರವಾಡ ಮಹಾನಗರಕ್ಕೆ ನಿಗದಿಪಡಿಸಿದ ಹಣವೆಷ್ಟು;

ಈ) ಈ ಹಣ ಸಾಲವೇ ಅಥವಾ ಅನುದಾನವೇ ಎಂಬುದನ್ನು ಸೃಷ್ಟಿಪಡಿಸುವುದು ಮತ್ತು ಈ ಯೋಜನೆ ಎಂದಿನಿಂದ ಜಾರಿಗೆ ಬರಲಿದೆ?

ಶ್ರೀ ಎಸ್. ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು) :

ಅ) ಕೇಂದ್ರ ಸರ್ಕಾರವು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತತು ಹಣಕಾಸು ಸಂಸ್ಥೆ ವತಿಯಿಂದ ಉತ್ತರ ಕರ್ನಾಟಕದ 11 ಪಟ್ಟಣಗಳ ಅಭಿವೃದ್ಧಿಗೆ ರೂ. 600 ಕೋಟಿಗಳ ಯೋಜನೆಯನ್ನು ನಿರೂಪಣೆ ಮಾಡಿರುವುದಿಲ್ಲ. ಆದರೆ. ರಾಜ್ಯ ಸರ್ಕಾರದ ವರ್ತಿಯಿಂದ ಉತ್ತರ ಕರ್ನಾಟಕ ಮೂಲ ಸ್ವೌಕರ್ಯ ಅಭಿವೃದ್ಧಿ ಯೋಜನೆಗೆ ರೂ. 1800 ಕೋಟಿಯ ಪ್ರಸ್ತಾವನೆಯನ್ನು ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್‌ಗೆ ಸಾಲದ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಆ) ಉತ್ತರ ಕರ್ನಾಟಕದ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿಗೆ ಈ ಕೆಳಕಂಡ ಪಟ್ಟಣಗಳನ್ನು ಆಯ್ಕೆ ಮಡಲಾಗಿದೆ.

ಬಾದಾಮಿ, ಬೀದರ್, ಬಿಜಾಪುರ, ಬೆಳಗಾಂ, ಬಳ್ಳಾರಿ, ಚಾಮರಾಜನಗರ, ದಾವಣಗೆರೆ, ಗದಗ್–ಬೆಟಗೇರಿ, ಗಂಗಾವತಿ, ಗೋಕಾಕ್, ಗುಲ್ಬರ್ಗಾ, ಹಾವೇರು, ಹೊಸಪೇಟೆ, ಹುಬ್ಬಳ್ಳಿ–ಧಾರವಾಡ, ಜಮಖಿಂಡಿ, ಕೊಪ್ಪಳ, ರಬಕವಿ ಬನಹಟ್ಟಿ, ರಾಯಚೂರು ರಾಣಿಬೆನ್ನೂರು ಯಾದಗಿರ್, ಬಸವಕಲ್ಯಾಣ ಸಿಂಧನೂರು, ಶಹಬಾದ್, ನಿಪ್ಪಾಣಿ ಮತ್ತು ಇಳ್‌ಕಲ್

ಇ) ಈ ಯೋಜನೆಯ ನಗರವಾರು ಹಣಕಾಸು ವಿವರಗಳನ್ನು ಇನ್ನು ಅಂತಿಮಗೊಳಿಸಲಾಗಿರುವುದಿಲ್ಲ.

ಈ) ಈ ಯೋಜನೆಯಡಿಯಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳು ತೆಗೆದುಕೊಳ್ಳುವ ಸಾಲ ಮತ್ತು ಅನುದಾನದ ಬಗ್ಗೆ ಸರ್ಕಾರವು ಇನ್ನು ಆದೇಶವನ್ನು ನೀಡಿರುವುದಿಲ್ಲ. ಈ ಯೋಜನೆಯನ್ನು ವರ್ಷದ ಅಂತ್ಯದೊಳಗೆ ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ಅವರು ಅನುಮೋದಿಸುವ ಸಂಭವವಿದೆ.

5375(5424) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ ನಗರದ ವಿದ್ಯಾನಗರದಲ್ಲಿ ಕೇಂದ್ರ ಸರ್ಕಾರದ ಅನುದಾನದಲ್ಲಿ ನಿರ್ಮಾಣದ ಹಂತದಲ್ಲಿ ಇರುವ ರಂಗ ಮಂದಿರದ ಕಟ್ಟಡ ಪೂರ್ಣ ನಿರ್ಮಾಣಗೊಳ್ಳದೇ ಇರಲು ಕಾರಣಗಳೇನು; ಇರುವ ಅಡೆತಡೆಗಳೇನು;

ಆ) ಆದಷ್ಟು ಬೇಗ ಈ ಕಟ್ಟಡ ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಎಷ್ಟು ಅವಧಿಯಲ್ಲಿ ಕಟ್ಟಡ ಪೂರ್ಣಗೊಳಿಸಲಾಗುವುದು, ಅದಕ್ಕಾಗಿ ತಗಲಿರುವ ವೆಚ್ಚವೆಷ್ಟು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) :

ಅ) ಹುಬ್ಬಳ್ಳಿ ನಗರದ ವಿದ್ಯಾನಗರದಲ್ಲಿ ಕೇಂದ್ರ ಸರ್ಕಾರದ ಅನುದಾನದಲ್ಲಿ ನಿರ್ಮಾಣಗೊಳ್ಳಬೇಕಿರುವ ಕಟ್ಟಡದ ವಿವರ ಈ ಕೆಳಗಿನಂತೆ ಇವೆ.

1) ರಂಗಮಂದಿರ ಮುಖ್ಯ ಕಟ್ಟಡ.

2) ಆರ್ಟ್ ಗ್ಯಾಲರಿ ಹಾಗೂ ಮ್ಯುಜಿಯಂ ಕಟ್ಟಡ

ಮೇಲಿನ ಕಾಮಗಾರಿಗಳ ಪೈಕಿ ಆರ್ಟ್‌ಗ್ಯಾಲರಿ ಹಾಗೂ ಮ್ಯುಜಿಯಂ ಕಟ್ಟಡಕ್ಕೆ ಕೇಂದ್ರ ಸರ್ಕಾರದಿಂದ ರೂಪಾಯಿ 50,00,000 ಅನುದಾನ ಬಿಡುಗಡೆಯಾಗಿದ್ದು ಅದರಲ್ಲಿ ಮಹಾನಗರ ಪಾಲಿಕೆ ಅನುದಾನ ಸೇರಿ ಸದರಿ ಕಟ್ಟಡ ಕಟ್ಟಲು ಈವರೆಗೆ ರೂಪಾಯಿ 99,46,200/–ಮೊತ್ತದ ಕಾಮಗಾರಿ ಮಾಡಲಾಗಿದೆ. ಕಟ್ಟಡ ಮುಕ್ತಾಯ ಹಂತದಲ್ಲಿದೆ.

ಸದರಿ ಯೋಜನೆಯಲ್ಲಿ ರಂಗಮಂದಿರದ ಮುಖ್ಯ ಕಟ್ಟಡ ನಿರ್ಮಿಸಲು ಅನುದಾನದ ಅವಶ್ಯಕತೆ ಇದ್ದು ಈ ಬಗ್ಗೆ ಅನುದಾನ ಕೋರಿ ಶೀಘ್ರದಲ್ಲಿಯೇ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಆ) ರಂಗ ಮಂದಿರ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು.

ಇ) ಅನುದಾನ ದೊರಕಿದ ನಂತರ ತೀವ್ರಗತಿಯಲ್ಲಿ ಕಟ್ಟಡ ಪೂರ್ಣಗೊಳಿಸಲಾಗುವುದು. ಇದಕ್ಕೆ ತಗಲುವ ಅಂದಾಕು ವೆಚ್ಚ ಸುಮಾರು ರೂ. 200 ಲಕ್ಷಗಳು.

5376(5425) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನ ಸದಾಶಿವನಗರದ ಬಳಿ ಇರುವ ಸ್ಯಾಂಕಿ ಕೆರೆ ಆಧುನಿಕರಣಕ್ಕೆ ಮಂಜೂರು ಮಾಡಿದ್ದ ಹಣ ಎಷ್ಟು;

ಆ) ಈ ಹಣದಿಂದ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳು ಯಾವುವು; ಅವುಗಳ ವೆಚ್ಚ ಎಷ್ಟು; (ಕಾಮಗಾರಿವಾರು ಮಾಹಿತಿ ನೀಡಿ);

ಇ) ಕಾಮಗಾರಿ ಪೂರ್ಣಗೊಂಡಿದ್ದು ಯಾವಾಗ; ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರು ಯಾರು;

ಈ) ಈಗ ಪುನಃ ಕೆರೆಯಲ್ಲಿ ಕಾಮಗಾರಿ ಕೈಗೆತ್ತಿಕೊಂಡಿರುವುದು ನಿಜವೇ; ಕೈಗೆತ್ತಿಕೊಂಡಿರುವ ಕಾಮಗಾರಿಗಳು ಯಾವುವು; ಇದರ ವೆಚ್ಚ ಎಷ್ಟು;

ಉ) ಕಾಮಗಾರಿಗೆ ಟೆಂಡರ್ ಕರೆಯಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) :

ಅ) ಸ್ಯಾಂಕಿ ಕೆರೆ ಜೀರ್ಣೋದ್ಧಾರ ಕಾಮಗಾರಿಗಾಗಿ ರೂ. 400.00 ಲಕ್ಷಗಳ ಅಂದಾಜಿನಲ್ಲಿ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ.

ಆ) ಕೆರೆಯ ಪುನಶ್ಚೇತನ ಕಾಮಗಾರಿಗಾಗಿ ಒಟ್ಟು 400.00 ಲಕ್ಷಗಳಿಗೆ ವಿವರವಾದ ಯೋಜನಾ ವರದಿಯನ್ನು ತಯಾರಿಸಿ ಅದರಂತೆ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಹಾಗೂ ಒಟ್ಟು ಕಾಮಗಾರಿಗೆ ರೂ. 360.50 ಲಕ್ಷಗಳು ವೆಚ್ಚವಾಗಿದೆ.

1. ಕೆರೆಯಲ್ಲಿದ್ದ ಹೂಳನ್ನು ತೆಗೆಯಲಾಗಿದೆ.

2. ಕೆರೆಯ ಸುತ್ತಲು 1.60 ಕಿ.ಮೀ. ಉದ್ದಕ್ಕೆ ಏರಿಯನ್ನು ನಿರ್ಮಿಸಿ ಕಲ್ಲಿನ ರಿವೆಟ್‌ಮೆಂಟ್ ಮಾಡಲಾಗಿದೆ.

3. ಕೆರೆಯಲ್ಲಿ ಗಣೇಶ ವಿಸರ್ಜನೆಗಾಗಿ ಪ್ರತ್ಯೇಕ ಕೊಳವನ್ನು ನಿರ್ಮಿಸಲಾಗಿದೆ.

4. ಕೆರೆಯಲ್ಲಿ ಬೋಟಿಂಗ್ ಚೆಟ್ಟಿಯನ್ನು ನಿರ್ಮಿಸಲಾಗಿದೆ.